**SC No. 109/2016**
**P.W. 25**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**SC No. 109/2016 P.W. 25**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **23.02.2026** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಮುಂದುವರಿದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **MGG** ವಕೀಲರಿಂದ :</u>

1. ನಾನು ಮು.ಮಾ. 24 ಅನ್ನು ನಾನು ಸ್ಥಳದಿಂದ ವಶಕ್ಕೆ ಪಡೆದಿಲ್ಲ ಮತ್ತು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ನಿಶಾನೆ. 8 ಮತ್ತು 9 ರ ಫೋಟೋಗಳಲ್ಲಿ ಮು.ಮಾ. 24 ಕಾಣಿಸುತ್ತಿಲ್ಲ ಎಂದರೆ ಸರಿ ಅಲ್ಲ. ಮು.ಮಾ. 24 ರಲ್ಲಿ ರಕ್ತದ ಕಲೆ ಅಥವಾ ಹೆಜ್ಜೆ ಗುರುತುಗಳು ಇಲ್ಲ ಎಂದರೆ ಸರಿ ಅಲ್ಲ. ನಿಶಾನೆ. 8 ಮತ್ತು 9 ರ ಫೋಟೋಗಳ ಪ್ರಕಾರ ನೆಲದ ಮೇಲೆ ಹೆಜ್ಜೆ ಗುರುತುಗಳು ಕಂಡು ಬರುತ್ತಿಲ್ಲ ಎಂದರೆ ಸರಿ ಅಲ್ಲ. ನಿಶಾನೆ. 35 ಮತ್ತು 36 ಗಳನ್ನು mobile service providers ನಿಂದ ಪಡೆದುಕೊಂಡಿಲ್ಲ ಎಂದರೆ ಸರಿ ಅಲ್ಲ. ವೊಡಫೋನ್ ಕಂಪನಿಯಿಂದ ನಿಶಾನೆ.ಪಿ. 36 ಅನ್ನು ಪಡೆದುಕೊಂಡಿದ್ದು, ನಿಶಾನೆ.ಪಿ. 35 ಅನ್ನು ಯಾವ ಕಂಪನಿಯಿಂದ ಪಡೆದುಕೊಂಡೆ ಎಂದು ನೆನಪಿಲ್ಲ. ವೊಡಫೋನ್ ಕಂಪನಿಯವರು ನಿಶಾನೆ.ಪಿ. 36 ನೀಡಿದ ಬಗ್ಗೆ ಆ ಕಂಪನಿ ಅಥವಾ ನೋಡಲ್ ಆಫೀಸರ್ ರವರ ಸಹಿ ಇಲ್ಲ ಎಂದರೆ ಸರಿ. ನಿಶಾನೆ.ಪಿ. 35 ಮತ್ತು 36 ದಾಖಲೆಗಳನ್ನು ಸಂಬಂಧಪಟ್ಟ ಕಂಪನಿಗಳಿಂದ ಪಡೆದುಕೊಂಡಿಲ್ಲ ಹಾಗೂ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ನಿಶಾನೆ.ಪಿ. 19 ರ ಮಹಜರ್ ಅನ್ನು ಸೃಷ್ಟಿಸಿದ್ದೇನೆ ಎಂದರೆ ಸರಿ ಅಲ್ಲ. ನಿಶಾನೆ.ಪಿ. 23 ರ ಸಿ.ಸಿ.ಟಿ.ವಿ. ಫೂಟೇಜ್ ನಲ್ಲಿ ಆರೋಪಿ ಕಾಣಿಸುತ್ತಿಲ್ಲ ಎಂದರೆ ಸರಿ ಅಲ್ಲ. ನಾನು ಫೋರಂ ವ್ಯಾಲ್ಯು ಮಾಲಿನಲ್ಲಿ ಆರೋಪಿ ಮು.ಮಾ. 6 ಅನ್ನು ಎಸೆಯುತ್ತಿದ್ದ ಬಗ್ಗೆ ಸಿ.ಸಿ.ಟಿ.ವಿ. ಫೂಟೇಜ್ ಅನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ನಿಶಾನೆ.ಪಿ. 14 ಅನ್ನು ಸೃಷ್ಟಿಸಿದ್ದೇನೆ ಎಂದರೆ ಸರಿ ಅಲ್ಲ. ಫೋರಂ ವ್ಯಾಲ್ಯು ಮಾಲಿನಲ್ಲಿ ಆರೋಪಿ ಮು.ಮಾ. 8 ಅನ್ನು ಎಸೆಯುತ್ತಿದ್ದ ಬಗ್ಗೆ ಸಿ.ಸಿ.ಟಿ.ವಿ. ಫೂಟೇಜ್ ವಶಕ್ಕೆ ಪಡೆದಿಲ್ಲ. ನಿಶಾನೆ.ಪಿ. 16 ಅನ್ನು ಸೃಷ್ಟಿಸಿದ್ದೇನೆ ಎಂದರೆ ಸರಿ ಅಲ್ಲ. ಮು.ಮಾ. 7, 8 ಆರೋಪಿಗೆ ಸಂಬಂಧಿಸಿದ್ದು ಎಂದು ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ ಅಲ್ಲ, ಸಿ.ಸಿ.ಟಿ.ವಿ. ಫೂಟೇಜ್ ನಲ್ಲಿ ಅದು ಕಾಣಿಸುತ್ತದೆ. ಜೆಲಸ್ ಜೀನ್ಸ್ / ಮುಮಾ. 6 ಫ್ರಾಸಾ. 8 ರವರಿಗೆ

ಸಂಬಂಧಿಸಿದ್ದು ಎಂದು ತೋರಿಸಿಸಲು ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ ಅಲ್ಲ. ಮು.ಮಾ. 6, 7 ಮತ್ತು 8 ಆರೋಪಿಗೆ ಹೊಂದಾಣಿಕೆಯಾಗುವುದಿಲ್ಲ ಎಂದರೆ ಸರಿ ಅಲ್ಲ. ಮು.ಮಾ. 6, 7 ಮತ್ತು 8 ಇವುಗಳು ಆರೋಪಿಗೆ ಪಿಟ್ ಆಗುತ್ತದೆ ಎಂಬ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ ಅಲ್ಲ. ಸಿ.ಸಿ.ಟಿ.ವಿ. ಪೂಟೇಜ್ ನಲ್ಲಿ ಆರೋಪಿ ಧರಿಸಿರುವುದು ಕಂಡು ಬರುತ್ತದೆ. ಮು.ಮಾ. 6 ರ ಮೇಲೆ ರಕ್ತದ ಕಲೆಗಳು ಇವೆ.

2. ಆರೋಪಿತನು ಯವತ್ತೂ ಸ್ವ-ಇಚ್ಚಾ ಹೇಳಿಕೆಯನ್ನು ಪೊಲೀಸರ ಮುಂದೆ ನೀಡಿಲ್ಲ ಹಾಗೂ ಅದನ್ನು ಸೃಷ್ಟಿಸಿದ್ದು ಎಂದರೆ ಸರಿ ಅಲ್ಲ. ನಿಶಾನೆ.ಪಿ. 15 ಸೃಷ್ಟಿಸಿದ ದಾಖಲೆ ಎಂದರೆ ಸರಿ ಅಲ್ಲ. ನಿಶಾನೆ.ಪಿ. 42 ರ ಪ್ರಕಾರ FSL ರವರ ಪರೀಕ್ಷೆ ಮಾಡಿದ 14 ವಸ್ತುಗಳಲ್ಲಿ ಆರೋಪಿಯ ಡಿ.ಎನ್.ಎ. ಹೊಲಿಕೆ ಇರುವುದಿಲ್ಲ ಎಂದು ಕೊಟ್ಟಿದ್ದಾರೆ ಎಂದರೆ ಸರಿ. ನಿಶಾನೆ.ಪಿ. 43 ರ ಪ್ರಕಾರ RFSL, Mysore ನ ವರದಿಯಲ್ಲಿ ಎರಡು ವಸ್ತುಗಳ ಮೇಲೆ ಆರೋಪಿಯ ಸೆಮನ್ ಟ್ರೆಸಸ್ ಇರುವುದಿಲ್ಲ ಎಂದು ನಮೂದು ಆಗಿದೆ ಎಂದರೆ ಸರಿ. ನಿಶಾನೆ.ಪಿ. 14 ರಲ್ಲಿ ಕೊನೆಯ ಎರಡು transaction ಗಳು ಆರೋಪಿ ಅಥವಾ ಮೃತಳು ಖರೀದಿ ಮಾಡಿದ ಬಗ್ಗೆ ನಮೂದು ಆಗಿಲ್ಲ ಎಂದರೆ ಸರಿ ಅಲ್ಲ. ನಿಶಾನೆ.ಪಿ. 14 ರಲ್ಲಿ Password change or attempting to wrong password several times ಕಂಡು ಬರುತ್ತಿಲ್ಲ ಎಂದರೆ ಸರಿ. ನಿಶಾನೆ.ಪಿ. 14 ರಲ್ಲಿ ಕೊನೆಯ 4 ಪುಟಗಳು screenshots printout ಎಂದರೆ ಸರಿ. ಅದನ್ನು ಬ್ಯಾಂಕ್ ನವರೆ ಕವರಿಂಗ್ ಲೆಟರ್ ಜೊತೆಗೆ ಕೊಟ್ಟಿದ್ದಾರೆ. ನಿಶಾನೆ.ಪಿ. 14 ರಲ್ಲಿ screenshots printout ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ನಿಶಾನೆ.ಪಿ. 14 ರಲ್ಲಿ screenshots printout ಪೂರ್ತಿ ಇರುವುದಿಲ್ಲ ಎಂದರೆ ಸರಿ. ಘಟನೆ ಸಮಯದಲ್ಲಿ ಅಕ್ಕ ಪಕ್ಕದವರು ಅಥವಾ ಯಾರು ಮೃತಳು ಕಿರುಚುತ್ತಿದ್ದ ಬಗ್ಗೆ ಮತ್ತು ಆಕೆ ಸಹಾಯಕ್ಕೆ ಕೂಗುತ್ತಿದ್ದ ಬಗ್ಗೆ ಕೇಳಿದವರನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿ. ಸಮಾನ್ಯವಾಗಿ ಮೃತರು ಕಿರುಚಾಡದೇ ಅಥವಾ ಸಹಾಯಕ್ಕೆ ಕೂಗದೇ ಇದ್ದರೇ ಅವರು ನಿದ್ದೆ ಮಾಡುತ್ತಿರಬಹುದು ಅಥವಾ ಹೆಚ್ಚು ಮದ್ಯಪಾನ ಮಾಡಿರಬಹುದು ಎಂದರೆ ಸರಿ ಅಲ್ಲ.

3. ನನ್ನ ತನಿಖೆ ಪ್ರಕಾರ ಮೃತಳು ಮದ್ಯಪಾನ ಮಾಡಿರಲಿಲ್ಲ ಅಥವಾ ಯಾವುದೇ ರೀತಿಯ ನಶೆಯಲ್ಲಿ ಇರಲಿಲ್ಲ ಎಂದು ಕಂಡು ಬಂತು. ಮೃತಳು ಈ ಘಟನೆಗೆ ಸ್ವಲ್ಪ ಸಮಯದ ಮೊದಲು

**SC No. 109/2016**
**P.W. 25**

ಬೇರೆಯವರೊಂದಿಗೆ ಗಲಾಟೆ ಮಾಡಿಕೊಂಡು ಕಾಡುಗೋಡಿ ಠಾಣೆಗೆ ದೂರು ನೀಡಿದ್ದಳು ಎಂದರೆ ಸರಿ ಅಲ್ಲ. ಆಕೆಗೆ ಆತನಿಂದ ಪ್ರಾಣಾ ಬೆದರಿಕೆ ಇತ್ತು ಎಂದರೆ ಸರಿ ಅಲ್ಲ. ನಾನು ಮೊದಲು ಅಪರಾಧ ಮಾಡಿದ ವ್ಯಕ್ತಿಯ ವಿರುದ್ಧ ತನಿಖೆ ಕೈಗೊಂಡು ನಂತರದಲ್ಲಿ ಆತನನ್ನು ಬಿಟ್ಟು ಈ ಆರೋಪಿಯ ಮೇಲೆ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ. ನಾನು ಸ್ಥಳದಲ್ಲಿ ಯಾವುದೇ ಮಹಜರ್ ಗಳನ್ನು ಮಾಡಿಲ್ಲ ಹಾಗೂ ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದೆರ ಸರಿ ಅಲ್ಲ. ಮೃತಳ ಬಟ್ಟೆಯ ಮೇಲೆ ಯಾವುದೇ ರಕ್ತದ ಕಲೆಗಳು ಮರಣೋತ್ತರ ಪರೀಕ್ಷೆಗೆ ಕಳುಹಿಸಿದಾಗ ಇರಲಿಲ್ಲ ನಂತರದಲ್ಲಿ ಸೃಷ್ಟಿಸಿದ್ದು ಎಂದೆರ ಸರಿ ಅಲ್ಲ. ಅದೇ ರೀತಿ ಮು.ಮಾ. 6 ರಿಂದ 8 ರ ಮೇಲೆ ಮೃತಳ ರಕ್ತದ ಕಲೆಗಳನ್ನು ಹಾಕಿಸಿದ್ದೇನೆ ಎಂದರೆ ಸರಿ ಅಲ್ಲ. ಮೃತಳ ಕುತ್ತಿಗೆಯಲ್ಲಿ ಇದ್ದ ಲ್ಯಾಪ್ ಟಾಪ್ ವೈರ್ ಅನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸುವ ಮೊದಲು ಬದಲಾವಣೆ ಮಾಡಿಸಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿಗೂ ಈ ಕೃತ್ಯಕ್ಕೂ ಯಾವುದೇ ಸಂಬಂಧ ಇಲ್ಲ ಮತ್ತು ಆತನ ವಿರುದ್ಧ ಸುಳ್ಳು ಪ್ರಕರಣದ ದಾಖಲು ಮಾಡಿದ್ದೇನೆ ಎಂದರೆ ಸರಿ ಅಲ್ಲ. ನಾನು ಆರೋಪಿ ಮತ್ತು ಮೃತಳ ನಡುವೆ ಯಾವುದೇ ವ್ಯಾಜ್ಯ, ವೈಶಮ್ಯ ಮತ್ತು ಗಲಾಟೆ ಇದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ ಅಲ್ಲ, ಕಾರಣ ಸ್ವ-ಇಚ್ಛಾ ಹೇಳಿಕೆಯಲ್ಲಿ ಹೇಳಿರುತ್ತಾರೆ. ಆರೋಪಿ ಈ ಕೃತ್ಯ ಮಾಡಿರುತ್ತಾನೆ ಎಂದು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ ಅಲ್ಲ. ಮು.ಮಾ. 24 ರ ಹೆಜ್ಜೆ ಗುರುತು ಮು.ಮಾ. 6 ರ ಶೂ ಗೆ ಹೊಂದಾಣಿಕೆ ಆಗುವುದಿಲ್ಲ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆ ಇಲ್ಲ.</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.